# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಕರ್ನಾಟಕ ಕಾರ್ಯಕ್ರಮದಡಿ ಕರ್ನಾಟಕ ಗೃಹ ಮಂಡಳಿಯು 50 ಮಾದರಿ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ: 1. ಆಯುಕ್ತರು, ಕರ್ನಾಟಕ ಗೃಹ ಮಂಡಳಿರವರ ಪತ್ರ ಸಂಖ್ಯೆ: ಕಗೃಮಂ/ಪ್ರವ್ಯ(ತಾಂ)/ಸುಮಾವವಯೋ/ಬೇಸ/23/2004-05, ದಿನಾಂಕ: 12-4-2005.

2. ಆಯುಕ್ತರು, ಕರ್ನಾಟಕ ಗೃಹ ಮಂಡಳಿ ರವರ ಪತ್ರ ಸಂಖ್ಯೆ: ಕಗೃಮಂ/ಪ್ರವ್ಯ/(ತಾಂ)ಸುಮಾವವಯೋ/ಬೇಸ/23/2004-05, ದಿನಾಂಕ:10-1-2006.

ಪ್ರಸ್ತಾವನೆ:

ಓದಲಾದ ಕ್ರಮ ಸಂಖ್ಯೆ 1 ಮತ್ತು 2 ರಲ್ಲಿ ಕರ್ನಾಟಕ ಗೃಹ ಮಂಡಳಿಯು ಸುವರ್ಣ ಕರ್ನಾಟಕ ಕಾರ್ಯಕ್ರಮದಡಿ 50 ಮಾದರಿ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.

ಓದಲಾದ ಕ್ರಮ ಸಂಖ್ಯೆ: 2 ರಲ್ಲಿ ಸುವರ್ಣ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ ಸುವರ್ಣ ಕರ್ನಾಟಕ ವಸತಿ ಯೋಜನೆಯಡಿಯಲ್ಲಿ 50 ಮಾದರಿ ವಸತಿ ಯೋಜನೆಗಳನ್ನು ಕಾರ್ಯಗತಗೊಳಿಸಲು ದಿನಾಂಕ: 16-12-2004 ರಂದು ನಡೆದ 390ನೇ ಮಂಡಳಿ ಸಭೆಯಲ್ಲಿ ಅನುಮೋದನೆಯನ್ನು ನೀಡಿರುವುದಾಗಿ ತಿಳಿಸಲಾಗಿರುತ್ತದೆ.

ಈಗಾಗಲೇ ಕರ್ನಾಟಕ ಗೃಹ ಮಂಡಳಿ ಹಮ್ಮಿಕೊಂಡಿರುವ 100 ವಸತಿ ಯೋಜನೆಗಳ ಕಾರ್ಯಕ್ರಮವನ್ನು ಮುಗಿಯುವ ಹಂತದಲ್ಲಿದ್ದು, ಈ ಪೈಕಿ 91 ಯೋಜನೆಗಳು ಪೂರ್ಣವಾಗಿದ್ದು, ಇನ್ನು 09 ಯೋಜನೆಗಳು ಬೇಗನೆ ಮುಗಿಯುತ್ತಲಿದ್ದು, ಈ ಹಿನ್ನಲೆಯಲ್ಲಿ ಯಶಸ್ವಿಗೊಂಡಿರುವ 100 ವಸತಿ ಯೋಜನೆಗಳ ಮಾದರಿಯಲ್ಲಿಯೇ ಕರ್ನಾಟಕ ಗೃಹ ಮಂಡಳಿಯು ಈ ಸುವರ್ಣ ಕರ್ನಾಟಕ ಕಾರ್ಯಕ್ರಮದಡಿ 50 ಮಾದರಿ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಈ ಕಾರ್ಯಕ್ರಮವನ್ನು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದ್ದು, ಮೊದಲ ಸಂದರ್ಭದಲ್ಲಿ ಇದನ್ನು ಭೂಮಿ ಲಭ್ಯತೆಯ ಆಧಾರದ ಮೇಲೆ 50 ಸ್ಥಳಗಳನ್ನು ಗುರುತಿಸಿದ್ದು, ಈ ಯೋಜನೆಯನ್ನು ಮಂಡಳಿಯು Self finance schemes ಅಡಿಯಲ್ಲಿ ರೂ.1,40,685/- ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಾರ್ಯಗತಗೊಳಿಸಲಾಗುವುದು.